# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2207 |
| ಸದಸ್ಯರ ಹೆಸರು | : | ಶ್ರೀ ಬಿ. ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 18-03-2022 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕೃಷಿ ಇಲಾಖೆಯಿಂದ ಕೈಗೊಳ್ಳುತ್ತಿರುವ ಫಲಾನುಭವಿ ಆಧಾರಿತ ಯೋಜನೆಗಳು ಯಾವುವು; (ವಿವರ ನೀಡುವುದು) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕೃಷಿ ಇಲಾಖೆಯಿಂದ ಕೈಗೊಳ್ಳುತ್ತಿರುವ ಫಲಾನುಭವಿ ಆಧಾರಿತ ಯೋಜನೆಗಳ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ.<br>2014-15ನೇ ಸಾಲಿನಿಂದ ಜಲಾನಯನ ಅಭಿವೃದ್ಧಿ ಇಲಾಖೆ ವತಿಯಿಂದ ಕೇಂದ್ರ ಪುರಸ್ಕೃತ "ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ-ಮಳೆಯಾಶ್ರಿತ ಪ್ರದೇಶ ಅಭಿವೃದ್ಧಿ" ಕಾರ್ಯಕ್ರಮವನ್ನು ಫಲಾನುಭವಿ ಆಧಾರಿತ ಯೋಜನೆಯಾಗಿ ಶೇ.60 ಕೇಂದ್ರದ ಪಾಲು ಮತ್ತು ಶೇ.40 ರಾಜ್ಯದ ಪಾಲಿನ ಅನುದಾನದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ.<br>ಮುಂದುವರೆದು, ಈ ಯೋಜನೆಯಡಿ ಸಮಗ್ರ ಕೃಷಿ ಪದ್ಧತಿಗಳಾದ ತೋಟಗಾರಿಕೆ, ಜಾನುವಾರು, ಹುಲ್ಲುಗಾವಲು ಮತ್ತು ಅರಣ್ಯ-ಕೃಷಿ ಆಧಾರಿತ- ಕೃಷಿ ಪದ್ಧತಿಗಳನ್ನು ಅಳವಡಿಸಿ ಶೇ.50ರಷ್ಟು ಸಹಾಯಧನವನ್ನು ಹಾಗೂ ಮೌಲ್ಯಾಧಾರಿತ ಚಟುವಟಿಕೆಗಳಾದ ಜೇನು ಕೃಷಿಗೆ ಶೇ.40 ರಷ್ಟು, ರಸಮೇವು ತಯಾರಿಕಾ ಘಟಕಕ್ಕೆ ಶೇ.100ರಷ್ಟು, ಎರೆಹುಳು ತೊಟ್ಟಿ ಘಟಕಗಳಿಗೆ ಶೇ.50ರಷ್ಟು ಸಹಾಯಧನವನ್ನು ರೈತರಿಗೆ ನೀಡಲಾಗುತ್ತಿದ್ದು, ತರಬೇತಿ ಏರ್ಪಡಿಸಿ ಯೋಜನೆಯ ಬಗ್ಗೆ ಅರಿವು ಮೂಡಿಸಲು ಅವಕಾಶವಿರುತ್ತದೆ. |

| | | |
|---|---|---|
| ಆ) | ಮೇಲ್ಕಂಡ ಜಿಲ್ಲೆಗಳಿಗೆ ಕಳೆದ 2 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನ ಎಷ್ಟು; (ವಿವರ ನೀಡುವುದು) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಿಗೆ ಕೃಷಿ ಇಲಾಖೆಯಿಂದ ಕಳೆದ 2 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನದ ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ.<br>ಜಲಾನಯನ ಅಭಿವೃದ್ಧಿ ಇಲಾಖೆ ವತಿಯಿಂದ ಈ ಯೋಜನೆಯಡಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಿಗೆ ಕಳೆದ 2 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ<br>(ರೂ. ಲಕ್ಷಗಳಲ್ಲಿ)<br>ಕ್ರ.ಸಂ / ಜಿಲ್ಲೆಗಳು / ವರ್ಷ / ಬಿಡುಗಡೆಯಾದ ಅನುದಾನ<br>1 / ಕಲಬುರ್ಗಿ / 2020-21 / 57.54<br> / / 2019-20 / 42.42<br>2 / ಯಾದಗಿರಿ / 2020-21 / 20.19<br> / / 2019-20 / 27.45 |
| ಇ) | ಕೃಷಿ ಇಲಾಖೆಯಿಂದ ಯಾವ ಯಾವ ಬೆಳೆಗಳಿಗೆ ಬೆಂಬಲ ಬೆಲೆ ಘೋಷಿಸಲಾಗಿದೆ? (ವಿವರ ನೀಡುವುದು) | ಕೇಂದ್ರ ಸರ್ಕಾರದ ಕೃಷಿ ಹಾಗೂ ರೈತರ ಕಲ್ಯಾಣ ಮಂತ್ರಾಲಯವು ಪ್ರತಿ ವರ್ಷ ಮುಂಗಾರು ಹಾಗೂ ಹಿಂಗಾರು ಹಂಗಾಮಿನ ಪೂರ್ವದಲ್ಲಿ ಕೃಷಿ ಉತ್ಪನ್ನಗಳಿಗೆ ಕೃಷಿ ವೆಚ್ಚ ಮತ್ತು ಬೆಲೆ ಆಯೋಗದ (Commission on Agriculture Costs and Prices (CACP)) ಶಿಫಾರಸ್ಸಿನನ್ವಯ ಕನಿಷ್ಠ ಬೆಂಬಲ ಬೆಲೆಯನ್ನು ಘೋಷಿಸುತ್ತದೆ. 2021-22ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮಿನ ಬೆಳೆಗಳಿಗೆ ಘೋಷಿಸಿರುವ ಬೆಂಬಲ ಬೆಲೆ ವಿವರಗಳನ್ನು ಅನುಬಂಧ-3ರಲ್ಲಿ ಒದಗಿಸಲಾಗಿದೆ. |

ಸಂಖ್ಯೆ: AGRI-AML/89/2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

**ಅನುಬಂಧ-1**
**LCQ 2207**

**ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕೃಷಿ ಇಲಾಖೆಯಿಂದ ಕೈಗೊಳ್ಳುತ್ತಿರುವ ಫಲಾನುಭವಿ ಆಧಾರಿತ ಯೋಜನೆಗಳ ವಿವರ**

| ಕ್ರ. ಸಂ | ಫಲಾನುಭವಿ ಆಧಾರಿತ ಯೋಜನೆ/ ಕಾರ್ಯಕ್ರಮ | ವಿವರ |
|---|---|---|
| 1. | ಬಿತ್ತನೆ ಬೀಜಗಳ ಪೂರೈಕೆ | ಈ ಯೋಜನೆಯಡಿ ಸಾಮಾನ್ಯ ವರ್ಗದ ರೈತರಿಗೆ ಶೇ. 50 ಹಾಗೂ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75 ರ ರಿಯಾಯಿತಿ ದರದಲ್ಲಿ ವಿವಿಧ ಬೆಳೆಗಳ ಪ್ರಮಾಣಿತ/ ನಿಜ ಚೀಟಿ ಬಿತ್ತನೆ ಬೀಜಗಳನ್ನು ಒಟ್ಟಾರೆ ಗರಿಷ್ಟ 2.00 ಹೆಕ್ಟೇರ್ ಅಥವಾ ಅವರ ವಾಸ್ತವಿಕ ಹಿಡುವಳಿ (Actual holding) ಯಾವುದು ಕಡಿಮೆಯೋ ಆ ವಿಸ್ತೀರ್ಣಕ್ಕೆ ಮಾತ್ರ ವಿತರಣೆ ಮಾಡಲಾಗುತ್ತಿದೆ. |
| 2. | ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ | ಈ ಯೋಜನೆಯಡಿ ಪ್ರಕೃತಿ ವಿಕೋಪಗಳು, ಕೀಟಗಳು ಮತ್ತು ರೋಗಗಳಿಂದಾಗಿ ಯಾವುದೇ ಅಧಿಸೂಚಿತ ಬೆಳೆ ವಿಫಲವಾದ ಪಕ್ಷದಲ್ಲಿ ರೈತರಿಗೆ ವಿಮಾ ರಕ್ಷಣೆ ಮತ್ತು ಹಣಕಾಸು ಬೆಂಬಲ ನೀಡಲಾಗುವುದು. ರೈತರಿಗೆ ನೀಡುವ ವಿಮಾ ಕಂತಿನ ರಿಯಾಯಿತಿಯಲ್ಲಿ ರಾಜ್ಯ ಸರ್ಕಾರದ ಪಾಲನ್ನು ನೀಡಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ಅನುವು ಮಾಡಲಾಗುವುದು. |
| 3. | ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ (PMKISAN) | ಭಾರತ ಸರ್ಕಾರದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಸಾಗುವಳಿ ಭೂಮಿ ಹೊಂದಿರುವ ಎಲ್ಲಾ ಅರ್ಹ ರೈತರಿಗೆ ವಾರ್ಷಿಕ ರೂ.6000/-ಗಳ ನಗದನ್ನು ರೂ.2000/-ಗಳಂತೆ ಮೂರು ಕಂತುಗಳಲ್ಲಿ ನೇರ ನಗದು ವರ್ಗಾವಣೆ ಮೂಲಕ ನಾಲ್ಕು ತಿಂಗಳಿಗೊಮ್ಮೆ ನೀಡಲಾಗುವುದು. |
| 4. | ಸಾವಯವ ಕೃಷಿ | ಸಾವಯವ ಕೃಷಿ ಅಳವಡಿಕೆ ಮತ್ತು ದೃಡೀಕರಣ ಕಾರ್ಯಕ್ರಮದಡಿ ರಾಜ್ಯದ ಸಾವಯವ ಪ್ರಮಾಣೀಕೃತ ಪ್ರದೇಶವನ್ನು ವಿಸ್ತರಿಸುವ ನಿಟ್ಟಿನಲ್ಲಿ ಆಸಕ್ತ ಗುಂಪು ಮತ್ತು ವ್ಯಕ್ತಿಗತ ಪ್ರಸ್ತಾವನೆಗಳ ಪ್ರಮಾಣೀಕರಣಕ್ಕಾಗಿ ಅನುದಾನ ಬಳಕೆ ಮಾಡಲಾಗುತ್ತಿದೆ. |
| 5. | ರೈತ ಸಿರಿ | ಸಿರಿಧಾನ್ಯಗಳಾದ ನವಣೆ, ಹಾರಕ, ಸಾಮೆ, ಕೊರಲೆ, ಊದಲು ಬೆಳೆಗಳನ್ನು ಬೆಳೆದ ಎಲ್ಲಾ ವರ್ಗದ ರೈತರಿಗೆ ಪ್ರತಿ ಹೆಕ್ಟೇರಿಗೆ ರೂ.10,000/-ದಂತೆ ಗರಿಷ್ಠ ಎರಡು ಹೆಕ್ಟೇರುಗಳಿಗೆ ಪ್ರೋತ್ಸಾಹಧನವನ್ನು ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ ಮೂಲಕ ನೀಡಲಾಗುವುದು. ಸಿರಿಧಾನ್ಯಗಳನ್ನು ಬೆಳೆದ ರೈತರುಗಳಿಗೆ ಬೆಳೆ ಸಮೀಕ್ಷೆ ಆಧಾರದಂತೆ ಪ್ರೋತ್ಸಾಹಧನವನ್ನು ವಿತರಿಸಲಾಗುತ್ತಿದೆ. |
| 6. | ಸೂಕ್ಷ್ಮ ನೀರಾವರಿ | ಹನಿ / ತುಂತುರು ನೀರಾವರಿ ಘಟಕಗಳ ಅಳವಡಿಕೆಗೆ ಎಲ್ಲಾ ವರ್ಗದ ರೈತರಿಗೆ ಶೇ.90 ರಷ್ಟು ಸಹಾಯಧನ (2.00 ಹೆಕ್ಟೇರ್ ವರೆಗೆ) ಒದಗಿಸಲಾಗುತ್ತಿದೆ. |

| | | |
|---|---|---|
| 7. | ಕೃಷಿ ಯಾಂತ್ರೀಕರಣ ಹಾಗೂ ಕೃಷಿ ಉತ್ಪನ್ನಗಳ ಸಂಸ್ಕರಣೆ | ಸಣ್ಣ ಟ್ರ್ಯಾಕ್ಟರ್, ಪವರ್ ಟಿಲ್ಲರ್, ಭೂಮಿ ಸಿದ್ಧತೆ ಉಪಕರಣಗಳು, ನಾಟಿ / ಬಿತ್ತನೆ ಉಪಕರಣಗಳು, ಟ್ರ್ಯಾಕ್ಟರ್ / ಶಕ್ತಿಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳು, ಅಂತರ ಬೇಸಾಯ ಉಪಕರಣಗಳು, ತ್ಯಾಜ್ಯ ವಸ್ತುಗಳ ನಿರ್ವಹಣಾ ಉಪಕರಣಗಳು, ಕೊಯಿಲು ಮತ್ತು ಒಕ್ಕಣೆ ಮಾಡುವ ಉಪಕರಣಗಳು ಕೃಷಿ ಸಂಸ್ಕರಣಾ ಘಟಕಗಳು ಹಾಗೂ ಡೀಸಲ್ ಪಂಪ್ ಸೆಟ್‌ಗಳನ್ನು ಸಾಮಾನ್ಯ ರೈತರಿಗೆ ಶೇ.50 ರಷ್ಟು ಸಹಾಯಧನ ಹಾಗು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರಷ್ಟು ಸಹಾಯಧನವನ್ನು ಗರಿಷ್ಠ ಮಿತಿ ರೂ. ಒಂದು ಲಕ್ಷದವರೆಗೆ ನೀಡಲಾಗುತ್ತಿದೆ. ಸಣ್ಣ ಟ್ರ್ಯಾಕ್ಟರ್‌ಗಳ ಖರೀದಿಗೆ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ರೂ.3.00ಲಕ್ಷ ಹಾಗು ಸಾಮಾನ್ಯ ರೈತರಿಗೆ ರೂ.0.75ಲಕ್ಷಗಳಂತೆ ಗರಿಷ್ಠ ಸಹಾಯಧನವನ್ನು ನೀಡಲಾಗುತ್ತಿದೆ. |
| 8. | ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ | ಈ ಯೋಜನೆಯಡಿ ಬತ್ತ, ದ್ವಿದಳಧಾನ್ಯ, ನೂಟ್ರಿ ಸಿರಿಧಾನ್ಯ, ಎಣ್ಣೆಕಾಳು, ಕಬ್ಬು ಮತ್ತು ಹತ್ತಿ ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸಲು ಆಧುನಿಕ ತಾಂತ್ರಿಕತೆಗಳ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದರ ಜೊತೆಗೆ ಬಿತ್ತನೆ ಬೀಜ, ಲಘುಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಸಸ್ಯ ಸಂರಕ್ಷಣಾ ರಾಸಾಯನಿಕಗಳು, ಜಿಪ್ಸಂ/ ಕೃಷಿ ಸುಣ್ಣ, ಕೃಷಿ ಉಪಕರಣಗಳು, ತುಂತುರು ನೀರಾವರಿ ಘಟಕಗಳ ಅಳವಡಿಕೆಗೆ ಶೇ.50ರ ಸಹಾಯಧನವನ್ನು ನೀಡಲಾಗುತ್ತಿದೆ. |
| 9. | ಸಸ್ಯ ಸಂರಕ್ಷಣೆ | ಶೇ.50ರ ರಿಯಾಯಿತಿಯಲ್ಲಿ ಸಸ್ಯ ಸಂರಕ್ಷಣಾ ಪೀಡೆನಾಶಕಗಳನ್ನು ವಿತರಣೆ ಮಾಡಲಾಗುತ್ತಿದೆ. |
| 10. | ಮಣ್ಣಿನ ಸತ್ವ ಹೆಚ್ಚಿಸುವಿಕೆ ಯೋಜನೆ | ಎರೆಹುಳು ಗೊಬ್ಬರ, ಸಾವಯವ ಗೊಬ್ಬರ, ರಂಜಕಯುಕ್ತ ಸಾವಯವ ಗೊಬ್ಬರ, ಸಿಟಿ ಕಾಂಪೋಸ್ಟ್ ರಿಯಾಯತಿ ದರದಲ್ಲಿ ವಿತರಣೆ ಮಾಡುವುದು. ಸಾಮಾನ್ಯ ವರ್ಗದ ರೈತರಿಗೆ ಶೇ.50ರ ಸಹಾಯಧನ ಹಾಗೂ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75ರ ಸಹಾಯಧನ ನೀಡಲಾಗುತ್ತಿದೆ. |
| 11. | ಸಾವಯವ ಇಂಗಾಲ ಹೆಚ್ಚಿಸುವ ಅಭಿಯಾನ | ವಿವಿಧ ದ್ವಿದಳ ಧಾನ್ಯ ಬೀಜಗಳು ಮತ್ತು ಹಸಿರೆಲೆ ಗೊಬ್ಬರ ಬೀಜಗಳನ್ನು ಸಾಮಾನ್ಯ ವರ್ಗ ಹಾಗೂ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75ರ ಸಹಾಯಧನ ನೀಡಲಾಗುತ್ತಿದೆ. |
| 12. | ಕೃಷಿ ವಿಸ್ತರಣಾ ಉಪ ಅಭಿಯಾನ (SAME-ATMA) | ಯೋಜನೆಯಡಿ ಆಯೋಜಿಸುವ ವಿಸ್ತರಣಾ ಕಾರ್ಯಕ್ರಮಗಳ ಚಟುವಟಿಕೆಗಳಲ್ಲಿ ಎಲ್ಲಾ ವರ್ಗದ ರೈತರು / ರೈತ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಅವಕಾಶ ಕಲ್ಪಿಸಲಾಗಿದೆ. |
| 13. | ಮಣ್ಣಿನ ಫಲವತ್ತತೆ ಯೋಜನೆ | ಮಣ್ಣು ಆರೋಗ್ಯ ಚೀಟಿ ಶಿಫಾರಸ್ಸಿನ ಅನ್ವಯ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲು ರಿಯಾಯಿತಿ ದರದಲ್ಲಿ ರಸಗೊಬ್ಬರ, ಸಾವಯವ ಗೊಬ್ಬರ, ಜೈವಿಕ ಗೊಬ್ಬರ, ಲಘುಪೋಷಕಾಂಶ ಮಣ್ಣು ಸುಧಾರಕಗಳನ್ನು ಪ್ರತಿ ಹೆಕ್ಟೇರಿಗೆ ಗರಿಷ್ಟ ರೂ.2500/- ಸಹಾಯಧನ ನೀಡಲಾಗುತ್ತಿದೆ. |

ಕೃಷಿ ನಿರ್ದೇಶಕರು

LCQ 2207 ಅನುಬಂಧ 2

## 2019-20ನೇ ಸಾಲಿನಲ್ಲಿ ಕಲಬುರಗಿ ಜಿಲ್ಲೆಗೆ ವಿವಿಧ ಯೋಜನೆಗಳಡಿ ಬಿಡುಗಡೆಯಾದ ಅನುದಾನದ ವಿವರ (ರೂ.ಲಕ್ಷಗಳಲ್ಲಿ)

| ಕ್ರ.ಸಂ. | ಯೋಜನೆ ಮತ್ತು ಲೆಕ್ಕ ಶೀರ್ಷಿಕೆ | ಬಿಡುಗಡೆ |
|---|---|---|
| 1 | ಕೃಷಿ ಆಯುಕ್ತಾಲಯ (2401-00-001-1-01) | 39.49 |
| 2 | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ (2401-00-001-1-75) | 12.00 |
| 3 | ಕೃಷಿ ಭಾಗ್ಯ 2401-00-102-0-27 | 1558.58 |
| 4 | ಇತರೆ ಕೃಷಿ ಯೋಜನೆಗಳು (2401-00-102-0-28) | 336.60 |
| 5 | ಬೀಜ ಕ್ಷೇತ್ರಗಳು (2401-00-103-0-01) | 8.95 |
| 6 | ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ (2401-00-103-0-15) | 2955.86 |
| 7 | ಸಾವಯವ ಕೃಷಿ (2401-00-104-0-12) | 139.04 |
| 8 | ಕೃಷಿ ವಿಸ್ತರಣೆ ಮತ್ತು ತರಬೇತಿ (2401-00-109-0-21) | 179.00 |
| 9 | ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ (2401-00-110-0-07) | 1472.99 |
| 10 | ಕೃಷಿ ಮೂಲಭೂತ ಸೌಕರ್ಯ (4401-00-001-1-01) | 46.00 |
| 11 | ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ (2401-00-800-1-05) | 4288.00 |
|  | **ರಾಜ್ಯ ವಲಯ ಯೋಜನೆಗಳ - ಒಟ್ಟು** | **11036.51** |
| II | **ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳ ಒಟ್ಟು** | **100.00** |
| III | **ಕೇಂದ್ರ ವಲಯ/ಪುರಸ್ಕೃತ ಯೋಜನೆಗಳು** |  |
| 1 | ರಾಷ್ಟ್ರೀಯ ಆಹಾರ ಸುರಕ್ಷತೆ ಮಿಶನ್ (2401-00-102-0-08) | 1578.63 |
| 2 | NMSA-ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ (2401-00-108-1-15) | 2817.02 |
| 3 | NMSA-ಇತರೆ ಘಟಕಗಳು (2401-00-108-1-16) | 16.19 |
| 4 | ರಾಷ್ಟ್ರೀಯ ಕೃಷಿ ವಿಸ್ತರಣೆ ಮತ್ತು ತಂತ್ರಜ್ಞಾನ ಅಭಿಯಾನ (2401-00-800-1-53) | 962.39 |
| 5 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (2401-00-800-1-57) | 92.53 |
|  | **ಕೇಂದ್ರ ವಲಯ/ಪುರಸ್ಕೃತ ಯೋಜನೆಗಳು - ಒಟ್ಟು** | **5466.76** |
|  | **ಎಲ್ಲಾ ಒಟ್ಟು** | **16603.27** |

ಕೃಷಿ ನಿರ್ದೇಶಕರು

LCQ 2207 ಅನುಬಂಧ 2

## 2020-21ನೇ ಸಾಲಿನಲ್ಲಿ ಕಲಬುರಗಿ ಜಿಲ್ಲೆಗೆ ವಿವಿಧ ಯೋಜನೆಗಳಡಿ ಬಿಡುಗಡೆಯಾದ ಅನುದಾನದ ವಿವರ (ರೂ.ಲಕ್ಷಗಳಲ್ಲಿ)

| ಕ್ರ.ಸಂ. | ಯೋಜನೆ ಮತ್ತು ಲೆಕ್ಕ ಶೀರ್ಷಿಕೆ | ಬಿಡುಗಡೆ |
|---|---|---|
| 1 | ಕೃಷಿ ಆಯುಕ್ತಾಲಯ (2401-00-001-1-01) | 61.24 |
| 2 | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ (2401-00-001-1-75) | 4.28 |
| 3 | ಬೀಜ ಕ್ಷೇತ್ರಗಳು (2401-00-103-0-01) | 9.84 |
| 4 | ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ (2401-00-103-0-15) | 2183.76 |
| 5 | ಸಾವಯವ ಕೃಷಿ (2401-00-104-0-12) | 7.70 |
| 6 | ಕೃಷಿ ವಿಸ್ತರಣೆ ಮತ್ತು ತರಬೇತಿ (2401-00-109-0-21) | 174.49 |
| 7 | ಹೊಸ ಬೆಳೆ ವಿಮಾ ಯೋಜನೆ (2401-00-110-0-07) | 693.36 |
| 8 | ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ (2401-00-800-1-05) | 4806.10 |
| | **ರಾಜ್ಯ ವಲಯ ಯೋಜನೆಗಳ ಒಟ್ಟು** | **7940.77** |
| **II** | **ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳ ಒಟ್ಟು** | **69.02** |
| **III** | **ಕೇಂದ್ರ ಪುರಸ್ಕೃತ ಯೋಜನೆಗಳು** | |
| 1 | ರಾಷ್ಟ್ರೀಯ ಆಹಾರ ಸುರಕ್ಷತೆ ಮಿಶನ್ (2401-00-102-0-08) | 1455.41 |
| 2 | NMSA-ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ (2401-00-108-1-15) | 2187.95 |
| 3 | ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM)-2401-00-113-0-02 | 827.20 |
| 4 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (2401-00-800-1-57) | 96.53 |
| 5 | ಮಣ್ಣಿನ ಫಲವತ್ತತೆಯ ಯೋಜನೆ-2402-00-101-0-03 | 165.47 |
| | **ಕೇಂದ್ರ ಪುರಸ್ಕೃತ ಯೋಜನೆಗಳು - ಒಟ್ಟು** | **4732.56** |
| | **ಎಲ್ಲಾ ಒಟ್ಟು** | **12742.35** |

ಕೃಷಿ ನಿರ್ದೇಶಕರು

LCQ 2207 ಅನುಬಂಧ 2

## 2019-20ನೇ ಸಾಲಿನಲ್ಲಿ ಯಾದಗಿರಿ ಜಿಲ್ಲೆಗೆ ವಿವಿಧ ಯೋಜನೆಗಳಡಿ ಬಿಡುಗಡೆಯಾದ ಅನುದಾನದ ವಿವರ (ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಯೋಜನೆ ಮತ್ತು ಲೆಕ್ಕ ಶೀರ್ಷಿಕೆ | ಬಿಡುಗಡೆ |
|---|---|---|
| 1 | ಕೃಷಿ ಆಯುಕ್ತಾಲಯ (2401-00-001-1-01) | 58.30 |
| 2 | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ (2401-00-001-1-75) | 27.40 |
| 3 | ಕೃಷಿ ಭಾಗ್ಯ 2401-00-102-0-27 | 200.61 |
| 4 | ಇತರೆ ಕೃಷಿ ಯೋಜನೆಗಳು (2401-00-102-0-28) | 169.34 |
| 5 | ಬೀಜ ಕ್ಷೇತ್ರಗಳು (2401-00-103-0-01) | 2.00 |
| 6 | ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ (2401-00-103-0-15) | 1420.00 |
| 9 | ಕೃಷಿ ವಿಸ್ತರಣೆ ಮತ್ತು ತರಬೇತಿ (2401-00-109-0-21) | 58.17 |
| 11 | ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ (2401-00-110-0-07) | 1348.59 |
| 14 | ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ (2401-00-800-1-05) | 1861.20 |
| | **ರಾಜ್ಯ ವಲಯ ಯೋಜನೆಗಳ - ಒಟ್ಟು** | **5145.61** |
| **II** | **ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳ ಒಟ್ಟು** | **120.99** |
| **III** | **ಕೇಂದ್ರ ವಲಯ/ಪುರಸ್ಕೃತ ಯೋಜನೆಗಳು** | |
| 1 | ರಾಷ್ಟ್ರೀಯ ಆಹಾರ ಸುರಕ್ಷತೆ ಮಿಶನ್ (2401-00-102-0-08) | 903.92 |
| 2 | NMSA-ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ (2401-00-108-1-15) | 1497.00 |
| 3 | NMSA-ಇತರೆ ಘಟಕಗಳು (2401-00-108-1-16) | 10.00 |
| 4 | ರಾಷ್ಟ್ರೀಯ ಕೃಷಿ ವಿಸ್ತರಣೆ ಮತ್ತು ತಂತ್ರಜ್ಞಾನ ಅಭಿಯಾನ (2401-00-800-1-53) | 539.44 |
| 5 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (2401-00-800-1-57) | 68.55 |
| | **ಕೇಂದ್ರ ವಲಯ/ಪುರಸ್ಕೃತ ಯೋಜನೆಗಳು - ಒಟ್ಟು** | **3018.91** |
| | **ಎಲ್ಲಾ ಒಟ್ಟು** | **8285.51** |

ಕೃಷಿ ನಿರ್ದೇಶಕರು

# 2020-21ನೇ ಸಾಲಿನಲ್ಲಿ ಯಾದಗಿರಿ ಜಿಲ್ಲೆಗೆ ವಿವಿಧ ಯೋಜನೆಗಳಡಿ ಬಿಡುಗಡೆಯಾದ ಅನುದಾನದ ವಿವರ
(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಯೋಜನೆ ಮತ್ತು ಲೆಕ್ಕ ಶೀರ್ಷಿಕೆ | ಬಿಡುಗಡೆ |
|---|---|---|
| 1 | ಕೃಷಿ ಆಯುಕ್ತಾಲಯ (2401-00-001-1-01) | 99.27 |
| 2 | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ (2401-00-001-1-75) | 32.49 |
| 3 | ಕೃಷಿ ಭಾಗ್ಯ (2401-00-102-0-27) | 92.30 |
| 4 | ರೈತರ ಪ್ರೋತ್ಸಾಹ & ಬೆಂಬಲ ಯೋಜನೆಗಳು (2401-00-102-0-28) | 0.00 |
| 5 | ಬೀಜ ಕ್ಷೇತ್ರಗಳು (2401-00-103-0-01) | 8.63 |
| 6 | ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ (2401-00-103-0-15) | 1182.28 |
| 7 | ಸಾವಯವ ಕೃಷಿ (2401-00-104-0-12) | 5.95 |
| 8 | ಕೃಷಿ ವಿಸ್ತರಣೆ ಮತ್ತು ತರಬೇತಿ (2401-00-109-0-21) | 56.13 |
| 9 | ಹೊಸ ಬೆಳೆ ವಿಮಾ ಯೋಜನೆ (2401-00-110-0-07) | 1670.33 |
| 10 | ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ (2401-00-800-1-05) | 2060.50 |
| | **ರಾಜ್ಯ ವಲಯ ಯೋಜನಗಳ ಒಟ್ಟು** | **5207.88** |
| **II** | **ಕೇಂದ್ರ ಪುರಸ್ಕೃತ ಯೋಜನಗಳು** | |
| 1 | ರಾಷ್ಟ್ರೀಯ ಆಹಾರ ಸುರಕ್ಷತೆ ಮಿಶನ್ (2401-00-102-0-08) | 840.72 |
| 2 | NMSA-ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ (2401-00-108-1-15) | 1591.27 |
| 3 | ಮಳೆ ಆಶ್ರಿತ ಪ್ರದೇಶದ ಅಭಿವೃದ್ಧಿ (RAD)-2401-00-108-1-16 | 25.15 |
| 4 | ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM)-2401-00-113-0-02 | 43.58 |
| 5 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (2401-00-800-1-57) | 115.97 |
| | **ಕೇಂದ್ರ ಪುರಸ್ಕೃತ ಯೋಜನೆಗಳು - ಒಟ್ಟು** | **2616.69** |
| | **ಎಲ್ಲಾ ಒಟ್ಟು** | **7824.57** |

ಕೃಷಿ ನಿರ್ದೇಶಕರು

# ಅನುಬಂಧ 3

**(LCQ 2207)**

**2021-22ನೇ ಸಾಲಿನಲ್ಲಿ ವಿವಿಧ ಬೆಳೆಗಳಿಗೆ ಕೇಂದ್ರ ಸರ್ಕಾರ ಘೋಷಿಸಿರುವ ಬೆಂಬಲ ಬೆಲೆ ವಿವರ**

| ಕ್ರ.ಸಂ. | ಬೆಳೆ | ಬೆಂಬಲ ಬೆಲೆ (ಪ್ರತಿ ಕ್ವಿಂಟಾಲ್ ಗೆ ರೂ.ಗಳಲ್ಲಿ) |
|---|---|---|
| **ಮುಂಗಾರು ಹಂಗಾಮಿನ ಬೆಳೆಗಳು:** | | |
| 1 | ಭತ್ತ- ಸಾಮಾನ್ಯ | 1940-00 |
| | ಭತ್ತ- ಗ್ರೇಡ್ 'ಎ' | 1960-00 |
| 2 | ಮುಸುಕಿನ ಜೋಳ | 1870-00 |
| 3 | ಹೈಬ್ರಿಡ್ ಜೋಳ | 2738-00 |
| | ಬಿಳಿ ಜೋಳ (ಮಾಲ್ದಂಡಿ) | 2758-00 |
| 4 | ರಾಗಿ | 3377-00 |
| 5 | ಸಜ್ಜೆ | 2250-00 |
| 6 | ಉದ್ದು | 6300-00 |
| 7 | ಹೆಸರು | 7275-00 |
| 8 | ತೊಗರಿ | 6300-00 |
| 9 | ಶೇಂಗಾ | 5550-00 |
| 10 | ಸೂರ್ಯಕಾಂತಿ | 6015-00 |
| 11 | ಸೋಯಾಬೀನ್ (ಹಳದಿ) | 3950-00 |
| 12 | ಎಳ್ಳು | 7307-00 |
| 13 | ಹುಚ್ಚೆಳ್ಳು | 6930-00 |
| 14 | ಹತ್ತಿ- ಮೀಡಿಯಮ್ ಸ್ಟೇಪಲ್ ಲೆನ್ತ್ 24.5-25.5 ಮಿ.ಮೀ.<br>ಹತ್ತಿ- ಲಾಂಗ್ ಸ್ಟೇಪಲ್ ಲೆನ್ತ್ 29.5-30.5 ಮಿ.ಮೀ. | 5726-00<br>6025-00 |
| **ಹಿಂಗಾರು ಹಂಗಾಮಿನ ಬೆಳೆಗಳು:** | | |
| 1 | ಗೋಧಿ | 2015-00 |
| 2 | ಬಾರ್ಲಿ | 1635-00 |
| 3 | ಕಡಲೆ | 5230-00 |
| 4 | ಮಸೂರ | 5500-00 |
| 5 | ಸಾಸುವೆ | 5050-00 |
| 6 | ಕುಸುಬೆ | 5441-00 |
| **ಕೊಬ್ಬರಿ (2022 ಸಾಲು)** | | |
| ಉಂಡೆ ಕೊಬ್ಬರಿ | | 11000-00 |
| ಎಣ್ಣೆ ಕೊಬ್ಬರಿ | | 10590-00 |

ಕೃಷಿ ನಿರ್ದೇಶಕರು